ತಾರೀಖು 19ನೇ ಮಾರ್ಚೀ 1884.

ಷಿಕಾರಿಪುರ ತಾಲ್ಲೂಕು ಅಮಲ್ದಾರ ವ.ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ನಾರಣಾಚಾರ್ರಿಗೆ, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 23ನೇ ಸೆಕ್ಷನ್ (ಬಿ) ಕ್ಲಾಜ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ:—

(1) ಲಾಷ್ ವಿಚಾರಣೆ ಬಗ್ಯೆ ಅಧಿಕಾರ, ಸೆಕ್ಷನ್ 135.

(2) ಆವರಿಗೆ ದರ್ಯಾಫ್ತ್ ಮಾಡುವದಕ್ಕೆ ಅಧಿಕಾರವಿರುವ ಮೊಕ್ಕದ್ದಮೆಗಳಲ್ಲಿ ತಕ್ಕೀರುಗಳ ಫಿರ್ಯಾದುಗಳನ್ನು ದಾಖಲ್ಮಾಡಿ ಕೊಳ್ಳುವ ಬಗ್ಯೆ ಅಧಿಕಾರ, ಸೆಕ್ಷನ್ 141.

(3) ನಿರೋಧ ವಸ್ತೈರೇಗಳನ್ನು ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ, ಸೆಕ್ಷನ್ 518.

(4) ಹೇಸಿಗೆಯು ಬಾರ್ ಬಾರ್ ನಡಿಯದಂತೆ ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ, ಸೆಕ್ಷನ್ 519.

ಯಸ್. ವೆಂಕಟವರದಯ್ಯಂಗಾರ್,
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್ರೀಯವರ ಕೋರ್ಟಿನಿಂದ.

1884ನೇ ಇಸವಿ ಮಿಸಲೇನಿಯಸ್ ಕೇಸ್ ನಂಬರ್ 25.

ಮೃತಪಟ್ಟ ಚಿಕ್ಕಮಗಳೂರು ತಾಲ್ಲೂಕು ಅರಿಷಣಗುಪ್ಪೆ ಚನ್ನೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಅರಿಷಣಗುಪ್ಪೆ ಹೆಬ್ಬಳ್ಳಿ ನಂಜೇಗೌಡನು, ಮೃತಪಟ್ಟ ಚನ್ನೇಗೌಡನಿಗೆ ಅಣ್ಣನಾಗಬೇಕೆಂಬ ಹಕ್ಕುದಾರೀ ಮೇಲೆ ಅರಿಷಣಗುಪ್ಪೆ ನಂಜೇಗೌಡನು, ಅರಿಷಣಗುಪ್ಪೆ ವಾಸಸ್ಥನಾಗಿ ಮೃತಪಟ್ಟ ಚನ್ನೇಗೌಡನ ಜೆಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜೇಗೌಡನ ಅರ್ಜೀಯನ್ನು 1884ನೇ ಇಸವೀ ಏಪ್ರೆಲ್ ತಿಂಗಳು ತಾರೀಖು 9ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಮಾರ್ಚೀ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಮಿಸಲೇನಿಯಸ್ ನಂಬರ್ 27.

ಮೃತಪಟ್ಟ ಬೇಲೂರು ತಾಲ್ಲೂಕು ಅರೇಹಳ್ಳಿ ಪೇಟೆ ರುದ್ರಪ್ಪಶೆಟ್ಟಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಜೆಂಂಜೀ ಕಲ್ಯಾಣಪ್ಪಶೆಟ್ಟಿ ಮಗ ಶಾಂತವೀರಪ್ಪಶೆಟ್ಟಿಯು, ಮೃತಪಟ್ಟ ರುದ್ರಪ್ಪಶೆಟ್ಟಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಅರೇಹಳ್ಳಿ ಪೇಟೆ ಶಾಂತವೀರಪ್ಪಶೆಟ್ಟಿಯು, ಅರೇಹಳ್ಳಿ ವಾಸಸ್ಥನಾಗಿ ಮೃತಪಟ್ಟ ರುದ್ರಶೆಟ್ಟಿ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಶಾಂತವೀರಪ್ಪಶೆಟ್ಟಿಯ ಅರ್ಜಿಯನ್ನು 1884ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರುದ್ರಶೆಟ್ಟಿ ಆಸ್ತಿಗೆ ಹಕ್ಕುದಾರರಾದ ವಿಸಿಸ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಸಬ್ ಜಡ್ಜ.